# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಬಿಜಿಎಮ್/1493/2021
ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ: 09/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ವಿಜಯಪುರ ಜಿಲ್ಲೆ ಮತ್ತು ತಾಲ್ಲೂಕು, ತಹಶೀಲ್ದಾರ್‌ರವರ ಕಚೇರಿ, ಪ್ರಥಮ ದರ್ಜೆ ಸಹಾಯಕ, **ಶ್ರೀ. ರವೀಂದ್ರ ಬಿನ್ ಸಾಬು ಬಾಬಾನಗರ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ವಲಯ, ಬೆಳಗಾವಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ವಿಜಯಪುರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ರವೀಂದ್ರ, ಬಿನ್ ಸಾಬು ಬಾಬಾನಗರ, ಪ್ರಥಮ ದರ್ಜೆ ಸಹಾಯಕ, ತಹಶೀಲ್ದಾರವರ ಕಛೇರಿ, ವಿಜಯಪುರ, ವಿಜಯಪುರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ. ಶಿವಾನಂದ ಬಿನ್ ಸಂಗಪ್ಪ ಬಿರಾದಾರ, ಸಾ: ಹಲಗಣಿ, ವಿಜಯಪುರ, ವಿಜಯಪುರ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು, ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ವಿಜಯಪುರ ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ:02/2018 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರ ತಂದೆ ಸಂಗಪ್ಪ ದುಂಡಪ್ಪ ಬಿರಾದಾರರವರ ಹೆಸರಿನಲ್ಲಿ ಹಲಗಣಿಯ ಸರ್ವೆ ನಂ.41, ಕ್ಷೇತ್ರ 18-ಎಕರೆ 14-ಗುಂಟೆ ಜಮೀನು ಇದ್ದು, ಸದರಿ ಜಮೀನನ್ನು ಅವರ ಹಿರಿಯರು ಮಾರಾಟ ಮಾಡಬಾರದು ಅನ್ನುವ ಉದ್ದೇಶದಿಂದ 1978ನೇ ಇಸವಿಯಲ್ಲಿ 15-ವರ್ಷಗಳವರೆಗೆ ಅಂದರೆ 1978 ರಿಂದ 1993ರವರೆಗೆ ಹಸ್ತಾಂತರ ಮಾಡಬಾರದು ಎಂಬ ಶರತ್ತು ಇದ್ದು, ಶರತ್ತಿನ ಅವಧಿ ಮುಗಿದಿದ್ದರಿಂದ, ದೂರುದಾರರ ತಂದೆಯು ಶರತ್ತಿನ ಅವಧಿ

ಕಡಿಮೆ ಮಾಡಿಸಲು ಹಾಗೂ ಅವರ ಮಕ್ಕಳಿಗೆ ವಾಟ್ನಿ ಮಾಡಿಸುವ ಸಲುವಾಗಿ ದಿನಾಂಕ: 29/09/2017ರಂದು ತಹಶೀಲ್ದಾರ ವಿಜಯಪುರ ರವರ ಆಫೀಸಿನಲ್ಲಿ ಅರ್ಜಿ ಕೊಟ್ಟಿರುತ್ತಾರೆ. ಅರ್ಜಿ ಕೊಟ್ಟ ಒಂದು ವಾರದ ನಂತರ ದೂರುದಾರರು ವಿಜಯಪುರ ತಹಶೀಲ್ದಾರ್ರವರ ಕಚೇರಿಗೆ ಹೋದಾಗ, ಅವರ ಅರ್ಜಿ ಎದುರುದಾರರ ಕಡೆ ಬರುತ್ತದೆ ಅಂತಾ ಗೊತ್ತಾಗಿ, ಎದುರುದಾರರನ್ನು ಭೇಟಿ ಮಾಡಿದಾಗ, ಎದುರುದಾರರು ದೂರುದಾರರಿಗೆ ಇನ್ನೂ ಸಾಹೇಬರು ಆರ್ಡರ್ ಮಾಡಿಲ್ಲ, ಮಾಡಿದ ನಂತರ ಬರೆದು ಬಬಲೇಶ್ವರ ಉಪತಹಶೀಲ್ದಾರವರ ಕಡೆಗೆ ಕಳುಹಿಸುತ್ತೇನೆ, ಅವರ ಕಡೆಯಿಂದ ಬಂದ ನಂತರ ಮಾಡಿಸಿ ಕೊಡುತ್ತೇನೆ ಅಂತಾ ಹೇಳಿ, ಒಂದು ವಾರ ಬಿಟ್ಟು ಬರಲು ತಿಳಿಸಿರುತ್ತಾರೆ. ನಂತರ ಒಂದು ವಾರ ಬಿಟ್ಟು ಎದುರುದಾರರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ವಿಚಾರಿಸಿದಾಗ, ಬಬಲೇಶ್ವರ ಉಪತಹಶೀಲ್ದಾರವರ ಕಡೆಗೆ ಕಳುಹಿಸಿದ್ದಾಗಿ ಹೇಳಿರುತ್ತಾರೆ. 4-5ದಿನ ಬಿಟ್ಟು ಪುನ: ಬಬಲೇಶ್ವರ ಉಪತಹಶೀಲ್ದಾರವರ ಕಚೇರಿಗೆ ಹೋಗಿ ಕೇಳಲಾಗಿ ಅವರು ವಿಜಯಪುರದ ತಹಶೀಲ್ದಾರವರ ಕಚೇರಿಗೆ ಕಡತವನ್ನು ಕಳುಹಿಸಿದ್ದೇವೆ ಎಂದು ಹೇಳಿದ್ದು, ಆಗ ದೂರುದಾರರು ಎದುರುದಾರರನ್ನು ಕಚೇರಿಯಲ್ಲಿ ಭೇಟಿ ಮಾಡಿ ವಿಚಾರಿಸಿದಾಗ, ಎದುರುದಾರರು ಇನ್ನು ಸಾಹೇಬರ ಸಹಿ ಆಗಿಲ್ಲ, ಕಂಪ್ಯೂಟರ್ ಕೆಟ್ಟಿರುತ್ತದೆ ಅಂತಾ ಹೇಳಿರುತ್ತಾರೆ ಹಾಗೂ ದೂರುದಾರರು ಈ ವಿಷಯಕ್ಕೆ ಸಂಬಂಧಿಸಿದಂತೆ 4-5 ಬಾರಿ ಎದುರುದಾರರ ಕಚೇರಿಗೆ ತಿರುಗಾಡಿಸಿದ್ದು, ಮತ್ತೆ ದಿನಾಂಕ: 22/01/2018ರಂದು ಮಧ್ಯಾಹ್ನದ ಸುಮಾರಿಗೆ ಹೋಗಿ ವಿಚಾರಿಸಿ, ಸರ್ ನಮಗ್ಯಾಕೆ ಹಿಂಗ ತಿರುಗಾಡಿಸುತ್ತೀರಿ, ನಮ್ಮ ಕೆಲಸ ಬೇಗ ಮಾಡಿಕೊಡ್ರಿ ಅಂತಾ ವಿನಂತಿಸಿಕೊಂಡಾಗ, ಎದುರುದಾರರು ಎನರ ಕೊಟ್ಟರ ಮಾಡಿಸಿಕೊಡುತ್ತೇನೆ ಅಂತಾ ಹೇಳಿರುತ್ತಾರೆ. ಆಗ ದೂರುದಾರರು ನಾವು ಬಡವರು ಅದಿವಿ ಸರ್ ಅಂತಾ ಅಂದಾಗ ನಿಮ್ಮದು 18-ಎಕರೆ ಹೊಲ ಐತಿ 15,000/-ರೂ.ಗಳ ಲಂಚದ ಹಣವನ್ನು ನೀಡುವಂತೆ ಬೇಡಿಕೆಯಿಟ್ಟಿರುತ್ತಾರೆ ಹಾಗೂ ಎರಡು ದಿವಸ ಬಿಟ್ಟು ಬರ್ರಿ ಸಹಿ ಮಾಡಿಸಿ ಇಡ್ತೀನಿ ಅಂತಾ ಹೇಳಿರುತ್ತಾರೆ. ಆಗ ದೂರುದಾರರು ಸರ್ 5,000/-ರೂ.ಗಳು ಕೊಡ್ತೀನಿ ಎರಡು ದಿನ ಬಿಟ್ಟು ಬರ್ತಿನಿ ಅಂತಾ ಹೇಳಿದ್ದು, ಎದುರುದಾರರು ದೂರುದಾರರೊಂದಿಗೆ ಲಂಚದ ಹಣ ನೀಡಲು ಬೇಡಿಕೆ ಇಟ್ಟು ಮಾತನಾಡಿದ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿ:24/01/2018ರಂದು ಬೆಳಿಗ್ಗೆ 10-00 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ವಿಜಯಪುರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 02/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ಅದೇ ದಿನ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ವಿಜಯಕುಮಾರ ರೇವಣಸಿದ್ದ ಜಾಧವ, (ನೆರಳು ಸಾಕ್ಷಿ), 2) ಶ್ರೀ ಸಿದ್ದನಗೌಡ ಭೀಮನಗೌಡ ಪಾಟೀಲ್, ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಒಂದು ಮೊಬೈಲ್ ಅನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಮೊಬೈಲ್‌ನ್ನು ಪ್ಲೇ ಮಾಡಿ, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 500/- ಮುಖಬೆಲೆಯ 10-ನೋಟುಗಳು) ಒಟ್ಟು 5,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ತನಿಖಾಧಿಕಾರಿಗಳು ಪಂಚರ ಕಡೆಯಿಂದ ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿದ್ದು, ಅವುಗಳ ನಂ. ಮತ್ತು ಮೌಲ್ಯವನ್ನು ಪಂಚರು ಪರಿಶೀಲಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ಸಿದ್ದನಗೌಡ ಭೀಮನಗೌಡ ಪಾಟೀಲ್‌ರವರ ಕೈಗೆ ಕೊಟ್ಟಿದ್ದು, ಸದರಿಯವರು ಸದರಿ ನೋಟುಗಳನ್ನು ಎಣಿಸಿ ಅವುಗಳ ನಂ. ಮತ್ತು ಮೌಲ್ಯವನ್ನು ತಾಳೆ ಮಾಡಿ ಖಾತ್ರಿ ಪಡಿಸಿಕೊಂಡಿರುತ್ತಾರೆ ಹಾಗೂ ಫಿನಾಫ್ತಲೀನ್ ಲೇಪಿತ ಹಣವನ್ನು ದೂರುದಾರರು ಧರಿಸದ್ದ ಷರ್ಟಿನ ಎದೆಯ ಮೇಲಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಸಿದ್ದನಗೌಡ ಭೀಮನಗೌಡ ಪಾಟೀಲ ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ವಿಜಯಕುಮಾರ ರೇವಣಸಿದ್ದ ಜಾಧವರವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ

ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ನಿಮ್ಮ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುವಂತೆ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡ್‌ನ್ನು ದೂರುದಾರರಿಗೆ ತನಿಖಾಧಿಕಾರಿಗಳು ನೀಡಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರ ಮೊಬೈಲ್‌ನ ಮೆಮೊರಿ ಕಾರ್ಡನ್ನು ಸಿಬ್ಬಂದಿಯಿಂದ ಹೊರಗೆ ತೆಗೆಯಿಸಿ ಕಾರ್ಡ್ ರೀಡರ್ ಮುಖಾಂತರ ಲ್ಯಾಪ್ ಟಾಪ್‌ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ.24.01.2018ರಂದು ಬೆಳಿಗ್ಗೆ 11–20ರಿಂದ ಮಧ್ಯಾಹ್ನ 01–00 ಗಂಟೆಯವರೆಗೆ ವಿಜಯಪುರ ಎಸಿಬಿ ಕಚೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iv. ದಿನಾಂಕ:24/01/2018ರಂದು ಮಧ್ಯಾಹ್ನ 01–30 ಗಂಟೆಗೆ ದೂರುದಾರರು ಹಾಗೂ ನೆರಳು ಸಾಕ್ಷಿ ವಿಜಯಕುಮಾರ ರೇವಣಸಿದ್ದ ಜಾಧವರವರೊಂದಿಗೆ ಎದುರುದಾರರ ಕಚೇರಿಗೆ ಬಂದು ಎದುರುದಾರರನ್ನು ಬೇಟಿ ಮಾಡಿ ತನ್ನ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರು ದೂರುದಾರರಿಂದ ರೂ.5,000/– ಲಂಚದ ಹಣವನ್ನು ಕೇಳಿ ಎಡಗೈನಲ್ಲಿ ಪಡೆದು, ಎರಡೂ ಕೈಗಳಿಂದ ಎಣಿಸಿಕೊಂಡು, ಅವರು ಧರಿಸಿದ್ದ ಪ್ಯಾಂಟಿನ ಹಿಂದಿನ ಎಡಜೇಬಿಗೆ ಇಟ್ಟುಕೊಂಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಎದುರುದಾರರಿದ್ದ ಸ್ಥಳಕ್ಕೆ ಬಂದು ತಮ್ಮ ಗುರುತಿನ ಚೀಟಿ ತೋರಿಸಿ, ಅವರ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ ಎದುರುದಾರರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಎರಡು ಪ್ರತ್ಯೇಕ ಬಟ್ಟಲುಗಳಲ್ಲಿ ಎದುರುದಾರರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಗಳು ಪಡೆದ ಲಂಚದ ಹಣವನ್ನು ಎಲ್ಲಿಟ್ಟಿದ್ದೀರಿ ಎಂದು ಎದುರುದಾರರನ್ನು ವಿಚಾರಿಸಲಾಗಿ, ಎದುರುದಾರರು

ಲಂಚದ ಹಣವನ್ನು ಅವರ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ್ದು, ಪಂಚರ ಮೂಲಕ ಅವುಗಳನ್ನು ಹೊರತೆಗೆದಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ ಎದುರುದಾರರಿಗೆ ತಿಳಿಸಿದಾಗ, ಎದುರುದಾರರು ಅವರ ಕೋಣೆಯಲ್ಲಿರುವ ಟೇಬಲ್ ಡ್ರಾನಲ್ಲಿದ್ದ ಕಾಗದಪತ್ರಗಳನ್ನು ಹಾಜರುಪಡಿಸಿದ್ದು, ಆ ಕಾಗದಪತ್ರಗಳ ಪ್ರತಿಗಳನ್ನು ಶ್ರೀ. ವಿಜಯಕುಮಾರ್ ಶಿರಸ್ತೆದಾರ್, ತಹಶೀಲ್ದಾರವರ ಕಚೇರಿ, ವಿಜಯಪುರ, ರವರಿಂದ ಧೃಡೀಕರಿಸಿಕೊಂಡು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿದ್ದು, ಅದನ್ನು ಹಾಜರುಪಡಿಸಲು ಹೇಳಿದಾಗ ದೂರುದಾರರು ಹಾಜರುಪಡಿಸಿದ್ದು, ಅದನ್ನು ಚಾಲೂ ಮಾಡಿದಾಗ, ಅದರಲ್ಲಿ ಯಾವುದೇ ಧ್ವನಿ ಕೇಳಲಿಲ್ಲ. ಆಗ ತನಿಖಾಧಿಕಾರಿಗಳು ದೂರುದಾರರಲ್ಲಿ ಕೇಳಿದಾಗ ಅವರು ಗಡಿಬಿಡಿಯಲ್ಲಿ ವಾಯ್ಸ್ ರೆಕಾರ್ಡ್‌ನ್ನು ಸರಿಯಾಗಿ ಪ್ರೆಸ್ ಮಾಡಿರುವುದಿಲ್ಲ ಅಂತಾ ತಿಳಿಸಿರುತ್ತಾರೆ. ಆದ್ದರಿಂದ ತನಿಖಾಧಿಕಾರಿಗಳು ಸದರಿ ವಾಯ್ಸ್ ರೆಕಾರ್ಡ್‌ನಿಂದ ಯಾವುದೇ ಸಿಡಿಯನ್ನು ಮಾಡಿಕೊಂಡಿರುವುದಿಲ್ಲ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಎದುರುದಾರರು "ಹಲಗಣಿ ಗ್ರಾಮದ ರಿ.ಸ.ನಂ.41 ರಲ್ಲಿ ಹೊಸ ಶರ್ತ ಕಡಿಮೆ ಮಾಡಿ ಸಾದಾ ರೈತವಾರಿ ಮಾಡಲು ಸಂಗಪ್ಪ ದುಂಡಪ್ಪ ಬಿರಾದಾರ ಸಾ:ಹಲಗಣಿ ಇವರು ಸಲ್ಲಿಸಿದ ಅರ್ಜಿಯ ಕುರಿತು ಉಪ ತಹಶೀಲ್ದಾರ ಬಬಲೇಶ್ವರ ಇವರ ವರದಿ ನಂತರ ನಿಯಮಾನುಸಾರ ಕ್ರಮಕೈಗೊಂಡು ದಿನಾಂಕ: 22/01/2018 ರಂದು ತಹಶೀಲ್ದಾರ ಆದೇಶವಾಗಿದ್ದು, ಅದನ್ನು ಸ್ವತಹ ಅರ್ಜಿದಾರರಿಗೆ ಹಾಗೂ ನಾಡ ಕಚೇರಿ ಬಬಲೇಶ್ವರಕ್ಕೆ ಕಳುಹಿಸಿಕೊಡಲು ಜೆರಾಕ್ಸ ಮಾಡಿಸಲು ಅರ್ಜಿದಾರನಿಗೆ ಕೊಟ್ಟಿದ್ದು, ಸದರಿಯವರಿಗೆ ನಾನು ಯಾವುದೇ ಹಣ ವಗೈರೆ ಕೇಳಿರುವುದಿಲ್ಲ. ಅವನ ಕೆಲಸವನ್ನು ನಾನು ಮಾಡಿಕೊಟ್ಟಿದ್ದು, ಅವರ ಕೆಲಸ ಆದುದ್ದರಿಂದ ಹಣ ನೀಡಿದ್ದು ಇರುತ್ತದೆ. ಇದರಲ್ಲಿ ನಾನು ಅರ್ಜಿದಾರರಿಗೆ ಯಾವುದೇ ರೀತಿಯ ತೊಂದರೆ ಕೊಡುವ

ಉದ್ದೇಶ ಇರುವುದಿಲ್ಲ. ನಾನು ಅವರ ಕೆಲಸ ಮಾಡಿ ಕೊಟ್ಟಿರುತ್ತೇನೆ. ಅವರೆ ಒತ್ತಾಯಪೂರ್ವಕವಾಗಿ ಹಣ ನೀಡಿದ್ದು ಇರುತ್ತದೆ ಅಂತಾ ಮಾನ್ಯ ರವರಲ್ಲಿ ಬರಕೊಂಡ ಹೇಳಿಕೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ವಿಚಾರಿಸಿದಾಗ, ಆವರು ಶರ್ತು ಕಡಿಮೆ ಮಾಡಿಸಿಕೊಡಲು ನನ್ನಿಂದ ಲಂಚದ ಹಣ ಕೇಳಿ ಪಡೆದುಕೊಂಡಿರುತ್ತಾರೆ. ಎದುರುದಾರರ ಹೇಳಿಕೆ ನಿಜವಲ್ಲ ಅಂತ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ನೆರಳುಸಾಕ್ಷಿಯವರನ್ನು ವಿಚಾರಿಸಿದಾಗ, ಅವರು ಎದುರುದಾರರು ಬರೆದುಕೊಟ್ಟ ಹೇಳಿಕೆ ಸುಳ್ಳು ಇದ್ದು, ಲಂಚದ ಕೇಳಿ ಪಡೆದುಕೊಂಡಿರುವುದನ್ನು ಸಮೀಪದಲ್ಲಿ ನಿಂತು ನೋಡಿರುತ್ತೇನೆ ಹಾಗೂ ಅವರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡಿರುತ್ತೇನೆ ಅಂತಾ ಹೇಳಿ ಎದುರುದಾರರ ಹೇಳಿಕೆ ನಿಜವಲ್ಲ ಎಂದು ಹೇಳಿರುತ್ತಾರೆ. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ.24/01/2018ರಂದು ಮಧ್ಯಾಹ್ನ 01-40 ಗಂಟೆಯಿಂದ ಸಂಜೆ 05-30 ಗಂಟೆಯವರೆಗೆ ವಿಜಯಪುರ ತಹಶೀಲ್ದಾರರವರ ಕಚೇರಿಯಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿಸಿದ ಟ್ರಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

vii. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ:21/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಸಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತನ್ನ ಮೇಲೆ ದೂರುದಾರರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ, ದೂರುದಾರರ ಯಾವುದೇ ಕಡತ ತನ್ನ ಹತ್ತಿರ ಇದ್ದಿಲ್ಲವಾದ್ದರಿಂದ ತಾನು ಲಂಚ ಕೇಳುವ ಪ್ರಶ್ನೆಯೇ ಇಲ್ಲ, ದೂರುದಾರರಿಗೆ ತಾನು ಯಾವುದೇ ಲಂಚದ ಹಣವನ್ನು ಬೇಡಿಕೆ ಇಟ್ಟಿರುವುದಿಲ್ಲ, ತನಿಖಾಧಿಕಾರಿಗಳು ಸುಳ್ಳು ಪ್ರಾಯೋಗಿಕ ಹಾಗು ಟ್ರ್ಯಾಪ್

ಮಹಜರುಗಳನ್ನು ತಯಾರಿಸಿರುತ್ತಾರೆ. ತನಿಖಾಧಿಕಾರಿಗಳು ತನಗೆ ತನ್ನ ಲಿಖಿತ ಹೇಳಿಕೆ ಸಲ್ಲಿಸಲು ಸಾಕಷ್ಟು ಕಾಲಾವಕಾಶ ನೀಡಲಿಲ್ಲ. ತನಿಖಾಧಿಕಾರಿಗಳು ಯಾವುದೇ ಲಂಚದ ಹಣವನ್ನು ತನ್ನ ಪ್ಯಾಂಟ್ ಜೇಬಿನಿಂದ ವಶಪಡಿಸಿಕೊಂಡಿರುವುದಿಲ್ಲ ಮತ್ತು ತಾನು ತನ್ನ ಕರ್ತವ್ಯದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ದೂರುದಾರರು ತನ್ನ ಮೇಲೆ ಆಗದವರ ಮಾತು ಕೇಳಿ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದು ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಎದುರುದಾರರು ಖಂಡಿಕೆ–17ರಲ್ಲಿ ಉಚ್ಚನ್ಯಾಯಾಲಯ ಮತ್ತು ಸರ್ವೋಚ್ಚನ್ಯಾಯಾಲಯದ ಕೆಲವೊಂದು ತೀರ್ಪುಗಳನ್ನು ಉಲ್ಲೇಖಿಸಿದ್ದು, ಆದರೆ ಸದರಿ ತೀರ್ಪುಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸದೇ ಇರುವುದರಿಂದ, ಈ ಹಂತದಲ್ಲಿ ಅವುಗಳನ್ನು ಪರಿಗಣಿಸಲು ಬರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

viii. ಆಗ ಸದರಿ ಎದುರುದಾರರಿಂದ ದೊರೆತ ಹಣವನ್ನು ಜಪ್ತ ಮಾಡಿಕೊಂಡು ಪಂಚರ ಸಮಕ್ಷಮ ತನಿಖಾಧಿಕಾರಿಗಳು ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

ix. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮೊಬೈಲ್ ಧ್ವನಿ ಮುದ್ರಣವು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಿಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

x. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

5) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

10/11/24

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-1**
**ಕರ್ನಾಟಕ ರಾಜ್ಯ, ಬೆಂಗಳೂರು.**